ದೊಡ್ಡದಾಗಿ ಬೆಳೆದಿದೆ. ಇದರ ಜೊತೆಗೆ ಇವು ಮಳೆಯನ್ನು ತರುವಂತಹ ಗುಣ ಹೊಂದಿದ ಜಾತಿಯ ಗಿಡಗಳಾಗಿವೆ. ಕಾಡಿನ ಸಂಪತ್ತನ್ನು ತರುತ್ತವೆ. ಇದನ್ನು ನಾಶ ಮಾಡುವುದರಿಂದ ಈಚಲಿನ ಕೈಗಾರಿಕೆ ನಾಶವಾಗುವುದರ ಜೊತೆಗೆ ಕೈಗಾರಿಕಾ ಅವಲಂಬಿಗಳ ಕುಟುಂಬಗಳೇ ನಾಶವಾಗುತ್ತವೆ. ಆದ್ದರಿಂದ ದಟ್ಟವಾಗಿ ಬೆಳೆದಿರುವ ಈಚಲು ಗಿಡಗಳನ್ನು ನಾಶ ಮಾಡದಂತೆ ಮಾನ್ಯ ಅರಣ್ಯ ಮಂತ್ರಿಗಳನ್ನು ಸರ್ಕಾರವನ್ನು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

16 Demolition of Lane in R. S. 32 at M. M. Hall Road Hospet

SRI MOHAMED LIAQUDDIN BURANUDDIN.—Mr. Speaker, Lane bearing R S. No. 232 to the extent of 3 acres located at M. M. Halli Road Hospet was in possession of Idga Committee i. e., (Mamat E. Hadoes) has been demolished on 11-3-86. I would like to bring to the notice of the Hon'ble Minister for Wakf for necessary protection and restoration of Idga.

(ಗೊಂದಲ)

(ಶ್ರೀಮತಿ ಮುಕ್ತರುನ್ನೀಸಾ ಅವರು ಈ ಸಂದರ್ಭದಲ್ಲಿ ಡಿವಾಲಿಫ್ ಮಾಡುತ್ತಾ ಇರತಕ್ಕಂಥಾ ಫೋಟೋವನ್ನು ಮಾನ್ಯ ಮಂತ್ರಿಗಳ ಕಡೆ ಕಳುಹಿಸಿಕೊಟ್ಟರು)

ಶ್ರೀ ಬಿ. ರಾಚಯ್ಯ.—ಅವರು ಕೊಡಬೇಕು ಎಂದು ಕೇಳಿದರು. ಅದಕ್ಕೆ ನಾವು ರಕ್ಷಣೆ ಕೊಟ್ಟಿದ್ದೇವೆ. ಈ ವಿಚಾರದ ಬಗ್ಗೆ ಕಂದಾಯ ಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳು ಅವರು ಇದನ್ನು ಪರಿಶೀಲನೆ ಮಾಡಿ ಏನು ರಕ್ಷಣೆ ಕೊಡಬೇಕೋ ಅದನ್ನು ಕೊಡುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಈಗತಾನೇ ಈ ನೋಟೀಸ್ ಬಂದಿದೆ. ಆ ಜಮೀನನ್ನು ಕೊಡುವುದಕ್ಕೆ ೧೯೮೨ನೇ ಇಸವಿಯಲ್ಲಿ ಅರ್ಜಿ ಹಾಕಿದ್ದರು ಎಂದು ಹೇಳುತ್ತಾರೆ ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೆ. ಇವೊತ್ತೇ ನಾನು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ಮುಂದೆ ಯಾವ ಕ್ರಮವನ್ನೂ ಆದರ ಬಗ್ಗೆ ತೆಗೆದುಕೊಳ್ಳಬೇಡಿ. ಇದರ ಡೀಟೈಲ್ ರಿಪೋರ್ಟ್ ಕೊಡಿ ಎಂದು ಕೇಳುತ್ತೇನೆ. ಅವರ ರಿಪೋರ್ಟ್ ಬಂದಮೇಲೆ ನಾನು ಸೂಕ್ತ ಕ್ರಮಕ್ಕೆಗೊಳ್ಳುತ್ತೇನೆ.

೧೭ ಮೈಸೂರಿನ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಿಂದ ಅಧಿಕಾರ ದುರುಪಯೋಗ

* * * * *

ಅಧ್ಯಕ್ಷರು.—ಮಾನ್ಯ ಬಸವರಾಜು ಅವರು ಹೇಳಿದ್ದನೆಲ್ಲಾ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಬಿ. ಡಿ. ಬಸವರಾಜ್.—ನನ್ನ ಹತ್ತಿರ ಉತ್ತರ ಇದೆ. ಅದಕ್ಕೆ ಇದನ್ನೆಲ್ಲಾ ನಾನು ಹೇಳುತ್ತಿದ್ದೇನೆ.

೨-೩೦ ಪಿ. ಎಂ.

ಅಧ್ಯಕ್ಷರು.—ಅದೆಲ್ಲಾ ನಮ್ಮ ಲಕ್ಷ್ಯಕ್ಕೆ ಬಂದಿದೆ, ಕಾವು ಕುಳಿತುಕೊಳ್ಳಿ

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮೇಲೆ ಚಾರ್ಜ್ ಮಾಡಿದ್ದಾರೆ. ಮತ್ತು ಇನ್ನೂ ಕೆಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಈಗ ಉಪಕುಲಪತಿಗಳ ಮೇಲೆ ಆಪಾದನೆ ಮಾಡಿದ್ದಾರೆ. ಅವರು ಈ ಸಭೆಯ

*** ಸಭಾಧ್ಯಕ್ಷರ ಅಪ್ಪಣೆಯ ಮೇರೆಗೆ ಗುರುತಿಸಿರುವ ಭಾಗವನ್ನು ಕಡತದಿಂದ ತೆಗೆದಂ ಹಾಕಲಾಗಿದೆ.